ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 16–9–2017

## ಪತ್ರಿಕಾ ಆಮಂತ್ರಣ

1. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ "ವಿಶ್ವಕರ್ಮ ಜಯಂತ್ಯೋತ್ಸವ":

**ಉದ್ಘಾಟನೆ:**

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಅಧ್ಯಕ್ಷತೆ:**

ಆರ್.ವಿ. ದೇವರಾಜ್, ಶಾಸಕರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ಶಾಸಕರು, ಚಿಕ್ಕಪೇಟೆ ವಿಧನಸಭಾ ಕ್ಷೇತ್ರ

ದಿನಾಂಕ: 17–09–2017 ಭಾನುವಾರ, ಸಮಯ: ಸಂಜೆ 6.00 ಗಂಟೆಗೆ.

ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

ಸಂಖ್ಯೆ 85/205

# ಪೊಲೀಸರು ಮತ್ತು ಸಾರ್ವಜನಿಕರ ನಡುವೆ ಉತ್ತಮ ಭಾಂದವ್ಯ ಮೂಡಬೇಕು: –ರಾಜ್ಯಪಾಲ ವಜುಭಾಯಿವಾಲ

ಬೆಂಗಳೂರು, ಸೆಪ್ಟೆಂಬರ್ 16 ( ಕರ್ನಾಟಕ ವಾರ್ತೆ) :

ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ರಕ್ಷಣೆ ನೀಡುವುದು ಪೊಲೀಸರ ಕೆಲಸ, ಅಂತೆಯೇ ಜನಸಾಮಾನ್ಯರು ಸಹ ಪೊಲೀಸರು ಕರ್ತವ್ಯ ನಿರ್ವಹಿಸುತ್ತಾರೆ ಎಂಬುದನ್ನು ಅರಿತು ಸಮಾಜದ ಶಾಂತಿ, ಸುವ್ಯವಸ್ಥೆ ಕಾಪಾಡಲು ಪೊಲೀಸರೊಂದಿಗೆ

ಸಹಕರಿಸಬೇಕೆಂದು ರಾಜ್ಯಪಾಲರಾದ ವಜುಭಾಯಿ ರೂಡಬಾಯಿ ವಾಲ ಅವರು ಕರೆ ನೀಡಿದರು.

ರಾಜಭವನದ ಗಾಜಿನ ಮನೆಯ ಆವರಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಪೊಲೀಸರಿಗೆ ರಾಷ್ಟ್ರಪತಿಯವರ ಪದಕ ಪ್ರದಾನ ಮಾಡಿ ಮಾತನಾಡಿದ ಅವರು ಪೊಲೀಸರು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಗೃಹ ಇಲಾಖೆ ಮತ್ತು ರಾಜ್ಯ ಸರ್ಕಾರದ ಘನತೆ ಗೌರವ ಹೆಚ್ಚುತ್ತದೆ ಎಂದರು.

ಗಡಿಯಲ್ಲಿ ದೇಶ ಕಾಯುವ ಯೋಧರ ರೀತಿಯಲ್ಲಿ ಪೊಲೀಸರು ರಾಷ್ಟ್ರ, ರಾಜ್ಯ ರಕ್ಷಣೆಗಾಗಿ ಕರ್ತವ್ಯ ನಿರ್ವಹಿಸಬೇಕು, ತಮ್ಮ ಕರ್ತವ್ಯ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಅನೈತಿಕ ಚಟುವಟಿಕೆಗಳು ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಬೇಕು ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ಬುಡಸಹಿತ ಕಿತ್ತುಹಾಕಬೇಕು ಎಂದು ಅವರು ತಿಳಿಸಿದರು.

ಭ್ರಷ್ಟಾಚಾರ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಮೂಲಕ ದೇಶ ಸೇವೆಯನ್ನು ಪ್ರಾಮಾಣಿಕತೆಯಿಂದ ಮಾಡುವುದಾಗಿ ಪೊಲೀಸರು ಪಣತೊಡಬೇಕು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ ಸಮಾಜದ ಶಾಂತಿ, ಸುವ್ಯವಸ್ಥೆಗೆ ಭಂಗ ತರುವ ಸಮಾಜಘಾತುಕರಿಗೆ ಕಾನೂನು ರೀತಿ ಶಿಕ್ಷೆ ಕೊಡಿಸುವುದು ಮತ್ತು ಸಮಾಜಘಾತುಕರಿಂದ ಜನ ಸಾಮಾನ್ಯರಿಗೆ ತೊಂದರೆಯಾಗದ ರೀತಿ ರಕ್ಷಣೆ ನೀಡುವುದು ಸರ್ಕಾರದ ಮತ್ತು ಪೊಲೀಸರ ಕೆಲಸ ಎಂದ ಅವರು, ಪೊಲೀಸರು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕ್ಷಿಪ್ರಗತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ತಮ್ಮ ಜವಾಬ್ಧಾರಿಯನ್ನು ಅರಿತು ಪ್ರಾಮಾಣಿಕತೆಯಿಂದ ಮತ್ತು ದಕ್ಷತೆಯಿಂದ ಕರ್ತವ್ಯ ನಿರ್ವಹಿಸುವ ಪೊಲೀಸರಿಗೆ ವಿಶಿಷ್ಟ ಸೇವಾ ಪದಕಕ್ಕೆ ರಾಜ್ಯ ಸರ್ಕಾರವೇ ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಆಯಾ ವರ್ಷವೇ ರಾಷ್ಟ್ರಪತಿಗಳ ಪದಕ ಪ್ರದಾನ ಸಮಾರಂಭ ಏರ್ಪಡಿಸಲು ಕ್ರಮ ವಹಿಸುವುದಾಗಿ ಅವರು ತಿಳಿಸಿದರು.

ಸಾರ್ವಜನಿಕರ ವಿಶ್ವಾಸ ಪೊಲೀಸ್ ಇಲಾಖೆ ಮೇಲೆ ಹೆಚ್ಚಿದಾಗ ಮಾತ್ರ ಇಲಾಖೆಗೆ ಹೆಚ್ಚಿನ ಗೌರವ ಬೆಲೆ ದೊರೆಯುತ್ತದೆ ಎಂದ ಮುಖ್ಯಮಂತ್ರಿಗಳು, ಪದಕ ವಿಜೇತರು ತಮ್ಮ ಇತರೆ ಸಹೋದ್ಯೋಗಿಗಳಿಗೆ ಆದರ್ಶ ಮತ್ತು ಸ್ಫೂರ್ತಿಯಾಗಬೇಕು ಎಂದರು.

ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯ ಸರ್ಕಾರವು ಪೊಲೀಸರಿಗೆ ವಸತಿ, ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇವೆಗಳನ್ನು ಕಲ್ಪಿಸಿದ್ದು, 18 ವರ್ಷ ಸೇವೆ ಪೂರೈಸಿದವರಿಗೆ ಬಡ್ತಿ ನೀಡುವ ಮೂಲಕ

ಕರ್ತವ್ಯದಲ್ಲಿ ಮತ್ತಷ್ಟು ಕಾರ್ಯತತ್ಪರತೆ ಮೂಡಿಸಲಾಗಿದ್ದು, ಈ ನಿಟ್ಟಿನಲ್ಲಿ 11,000 ಪೊಲೀಸರಿಗೆ ಬಡ್ತಿ ನೀಡಲಾಗಿದೆ ಎಂದರು.

ಪೊಲೀಸರ ವೇತನ ಮತ್ತು ಭತ್ಯೆಯಲ್ಲಿ ತಾರತಮ್ಯ ಇದೆ ಎಂಬ ದೂರು ಕೇಳಿ ಬಂದಿರುವ ಹಿನ್ನೆಲೆಯ 6ನೇ ವೇತನ ಆಯೋಗದ ಮೂಲಕ ಈ ತಾರತಮ್ಯವನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಗೃಹ ಸಚಿವ ರಾಮಲಿಂಗಾರೆಡ್ಡಿ ಅವರು ಮಾತನಾಡಿ ಸಮಾಜದಲ್ಲಿ ಭಯಮುಕ್ತ ವಾತಾವರಣ ನಿರ್ಮಿಸುವಲ್ಲಿ ಪೊಲೀಸರ ಪಾತ್ರ ಮಹತ್ತರವಾದುದ್ದು ಎಂದರು.

ಸಮಾರಂಭದಲ್ಲಿ ಮುಖ್ಯ ಕಾರ್ಯದರ್ಶಿ ಸುಭಾಸ್‌ಚಂದ್ರ ಕುಂಠಿಆ, ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಸುಭಾಸ್‌ಚಂದ್ರ, ಡಿಜಿ ಮತ್ತು ಐಜಿ ರೂಪಕ್‌ಕುಮಾರ್ ದತ್ತ ಸೇರಿದಂತೆ ಇತರೆ ಗಣ್ಯರು ಮತ್ತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಧೀರ್ಘಕಾಲದ ಪೊಲೀಸ್ ಸೇವೆಯಲ್ಲಿ ಅಸಾಧಾರಣ, ದಕ್ಷತೆ ಮತ್ತು ಅರ್ಪಣ ಮನೋಭಾವವನ್ನು ಪ್ರದರ್ಶಿಸಿದ ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿಗಳ ಪೊಲೀಸ್ ವಿಶಿಷ್ಟ ಸೇವಾ ಪದಕ ನೀಡಲಾಗುತ್ತಿದ್ದು, ಈ ಸಂಬಂಧ 2014 ನೇ ಸಾಲಿಗೆ ಮೂರು, 2015 ನೇ ಸಾಲಿಗೆ 7 ಮತ್ತು 2016 ನೇ ಸಾಲಿಗೆ 3 ಮಂದಿಗೆ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕವನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಅಂತೆಯೇ 20 ವರ್ಷ ಸೇವೆಯನ್ನು ಪೂರೈಸಿದ, ಸೇವೆಯಲ್ಲಿ ದಕ್ಷತೆ, ನಿಷ್ಠೆ, ಉತ್ತಮ ಸಾಧನೆಗಳನ್ನು ಪ್ರದರ್ಶಿಸಿದ ಪೊಲೀಸ್ ಸಿಬ್ಬಂದಿಗಳಿಗೆ ಪೊಲೀಸ್ ಶ್ಲಾಘನೀಯ ಸೇವಾ ಪದಕಗಳನ್ನು ನೀಡಲಾಗುತ್ತಿದ್ದು, ಇದೇ ಸಂದರ್ಭ 2014 ನೇ ಸಾಲಿಗೆ 17 ಮಂದಿ, 2015 ನೇ ಸಾಲಿಗೆ 38 ಮಂದಿ ಹಾಗೂ 2016 ನೇ ಸಾಲಿಗೆ 20 ಮಂದಿಗೆ ಪದಕಗಳನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಎಂಆರ್‌ಎಂ:ಜಿಪಿಆರ್

ಸಂಖ್ಯೆ 86/206

## ಜಿ.ಎಸ್.ಟಿ.ಎನ್. ತಾಂತ್ರಿಕ ಅಡಚಣೆ ಶೀಘ್ರ ನಿವಾರಣೆ

**ಬೆಂಗಳೂರು, ಸೆಪ್ಟೆಂಬರ್ 16 ( ಕರ್ನಾಟಕ ವಾರ್ತೆ) :**

ಆನ್‌ಲೈನ್ ಮುಖಾಂತರ ಜಿ.ಎಸ್.ಟಿ. ರಿಟರ್ನ್ ಸಲ್ಲಿಸಲು ಇರುವ ತಾಂತ್ರಿಕ ಅಡಚಣೆಗಳನ್ನು ಅಕ್ಟೋಬರ್ 30 ರೊಳಗೆ ಬಹುತೇಕ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಜಿ.ಎಸ್.ಟಿ. ನೆಟ್‌ವರ್ಕ್‌ನ ತಾಂತ್ರಿಕ ಅಡಚಣೆ ನಿವಾರಣೆಗಾಗಿ ರಚಿಸಿರುವ ಸಚಿವರ ತಂಡದ ಅಧ್ಯಕ್ಷ, ಬಿಹಾರ ಉಪ ಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ ಅವರು ತಿಳಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಜಿ.ಎಸ್.ಟಿ. ನೆಟ್‌ವರ್ಕ್‌ನ ತಾಂತ್ರಿಕ ಅಡಚಣೆ ನಿವಾರಣೆಗಾಗಿ ರಚಿಸಿರುವ ಸಚಿವರ ತಂಡದ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಜಿ.ಎಸ್.ಟಿ.ಎನ್ ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ ನೆಟ್‌ವರ್ಕ್ ಆಗಿದ್ದು ಕಳೆದ ಎರಡುವರೆ ತಿಂಗಳ ಅವಧಿಯಲ್ಲಿ 22 ಕೋಟಿ.ಗೂ. ಹೆಚ್ಚು ಇನ್‌ವಾಯ್ಸ್‌ಗಳನ್ನು ದಾಖಲಿಸಲಾಗಿದೆ. ಹಳೆಯ ಹಾಗೂ ಹೊಸ ಡೀಲರುಗಳು ಸೇರಿದಂತೆ 85 ಲಕ್ಷಕ್ಕೂ ಹೆಚ್ಚು ಡೀಲರ್‌ಗಳು ಜಿ.ಎಸ್.ಟಿ.ಎನ್ ಅಡಿ ನೋಂದಾಯಿಸಿಕೊಂಡಿದ್ದಾರೆ.

ತೆರಿಗೆದಾರರು ತಮ್ಮ ಎಲ್ಲಾ ವಿವರಗಳ ತೆರಿಗೆ ಪಾವತಿ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿಯೇ ದಾಖಲಿಸಬೇಕಾಗಿದ್ದು ಇದರಲ್ಲಿ ಕಂಡು ಬಂದಿರುವ ತಾಂತ್ರಿಕ ಅಡಚಣೆಗಳ ಕುರಿತು ಸಚಿವರ ತಂಡವು ಸೆಪ್ಟೆಂಬರ್ 15 ಹಾಗೂ 16 ರಂದು ಸರ್ಕಾರಿ ಅಧಿಕಾರಿಗಳು, ತೆರಿಗೆ ಸಲಹೆಗಾರರು, ತಜ್ಞರು, ಬ್ಯಾಂಕರುಗಳು, ತೆರಿಗೆದಾರರು ಹೀಗೆ ಎಲ್ಲಾ ಭಾಗೀದಾರರೊಂದಿಗೆ ಸಮಾಲೋಚನೆ ನಡೆಸಿ ಸಮಸ್ಯೆಗಳನ್ನು ಗುರುತಿಸಲಾಗಿದೆ.

ಇಂದು ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸಿರುವ ಇನ್‌ಫೋಸಿಸ್ ಸಂಸ್ಥೆಯೊಂದಿಗೆ ವಿವರವಾಗಿ ಚರ್ಚಿಸಲಾಗಿದ್ದು ಈ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲು ಗಡುವು ನಿಗಧಿಪಡಿಸಲಾಗಿದೆ. ಅಕ್ಟೋಬರ್ 30 ರೊಳಗೆ ಶೇಕಡ 70 ರಷ್ಟು ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಚಿವರ ಗುಂಪು ಪ್ರತಿ 15 ದಿನಗಳಿಗೊಮ್ಮೆ ಸಭೆ ಸೇರಿ ಈ ಪರಿಹಾರಗಳ ಅನುಷ್ಠಾನವನವನ್ನು ಪರಿಶೀಲಿಸಲಿದೆ. ಇದು ಹೊಸ ವ್ಯವಸ್ಥೆಯಾಗಿರುವುದುರಿಂದ ಈ ರೀತಿ ಸಮಸ್ಯೆಗಳು ಬರುವುದು ಸಹಜ. ಇದನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದರು.

ಯಾವುದೇ ಕಾರಣಕ್ಕೂ ಜಿ.ಎಸ್.ಟಿ. 3 ಬಿ ರಿಟರ್ನ್ ಸಲ್ಲಿಕೆಯ ಅವಧಿಯನ್ನು ವಿಸ್ತರಿಸುವುದಿಲ್ಲ ಎಂದು ಕೇಂದ್ರ ಕಂದಾಯ ಇಲಾಖೆ ಕಾರ್ಯದರ್ಶಿ ಹಸ್ಮುಖ ಅದಿಯ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ತೆಲಂಗಾಣ ರಾಜ್ಯದ ಹಣಕಾಸು ಸಚಿವ ಇಟ್ಟಲ ರಾಜೇಂದ್ರ, ಜಿ.ಎಸ್.ಟಿ.ಎನ್. ಅಧ್ಯಕ್ಷ ಅಜಯ್ ಭೂಷಣ್ ಪಾಂಡೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ನಡೆದ ಸಭೆಯಲ್ಲಿ ಇವರೊಂದಿಗೆ ರಾಜ್ಯದ ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ಸಹ ಪಾಲ್ಗೊಂಡಿದ್ದರು.

ಸಂಖ್ಯೆ 87/207

## 2017-18 ನೇ ಸಾಲಿನ ಸರ್ವೋತ್ತಮ ಸೇವಾ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 16 ( ಕರ್ನಾಟಕ ವಾರ್ತೆ) :**

ರಾಜ್ಯ ಸರ್ಕಾರವು ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ/ನೌಕರರು ಮಾಡಿರುವ ಅತ್ಯುನ್ನತ ಸೇವೆ/ಸಾಧನೆ ಹಾಗೂ ಗುಣಾತ್ಮಕ ಕಾರ್ಯಕ್ಕಾಗಿ 2017-18 ನೇ ಸಾಲಿನ "ಸರ್ವೋತ್ತಮ ಸೇವಾ ರಾಜ್ಯ ಪ್ರಶಸ್ತಿ"ಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಿದೆ.

ಉತ್ತಮ ಸೇವೆಗೈದ ಮತ್ತು ಗುಣಾತ್ಮಕ ಆಡಳಿತ ನೀಡಿರುವ ಅಧಿಕಾರಿ/ನೌಕರರು ನಾಮ ನಿರ್ದೇಶನಗಳನ್ನು ಸಂಬಂಧಪಟ್ಟ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರ ಮೂಲಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ದಿನಾಂಕ 30-9-2017 ರೊಳಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಸಂಖ್ಯೆ 88/208

## ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದಲ್ಲಿ ನಡೆಯುವ ವಾರ್ಷಿಕ ಜಾತ್ರೆಗಳ ವಿವರ

**ಬೆಂಗಳೂರು, ಸೆಪ್ಟೆಂಬರ್ 16 ( ಕರ್ನಾಟಕ ವಾರ್ತೆ) :**

ಚಾಮರಾಜನಗರ ಜಿಲ್ಲೆಯ ಧರ್ಮಕ್ಷೇತ್ರ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದಲ್ಲಿ ಇದೇ ಸೆಪ್ಟೆಂಬರ್ 17 ರಿಂದ 21 ರವರೆಗೆ ಮಹಾಲಯ ಜಾತ್ರೆ, ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 2 ರವರೆಗೆ ದಸರಾ ಜಾತ್ರೆ, ಅಕ್ಟೋಬರ್ 17 ರಿಂದ 21 ರವರೆಗೆ ದೀಪಾವಳಿ ಜಾತ್ರೆ ನಡೆಯಲಿದೆ.

ಅಕ್ಟೋಬರ್ 22 ರಿಂದ 23 ರವರೆಗೆ 1ನೇ ಕಾರ್ತೀಕ ಸೋಮವಾರ, ಅಕ್ಟೋಬರ್ 29 ರಿಂದ 30 ರವರೆಗೆ 2ನೇ ಕಾರ್ತೀಕ ಸೋಮವಾರ, ನವೆಂಬರ್ 5 ರಿಂದ 6 ರವರೆಗೆ 3ನೇ ಕಾರ್ತೀಕ ಸೋಮವಾರ, ನವೆಂಬರ್ 12 ರಿಂದ 13 ರವರೆಗೆ 4ನೇ ಕಾರ್ತೀಕ ಸೋಮವಾರ ಹಾಗೂ ನವೆಂಬರ್ 16 ರಿಂದ 18 ರವರೆಗೆ ಎಣ್ಣೆ ಮಜ್ಜನ ಮತ್ತು ಅಮಾವಾಸ್ಯೆ ಜಾತ್ರೆಗಳು ನಡೆಯಲಿದೆ ಎಂದು ಶ್ರೀ ಮಲೈ ಮಹೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಭಕ್ತಾಧಿಗಳಲ್ಲಿ ಮನವಿ ಮಾಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಶ್ರೀಸ್ವಾಮಿಯವರ ಕೃಪೆಗೆ ಪಾತ್ರರಾಗುವಂತೆ ತಿಳಿಸಿದೆ.

ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ನಡೆಯುವ ವಾರ್ಷಿಕ ಜಾತ್ರೆಗಳಾದ ಮಹಾಲಯ, ದಸರಾ, ದೀಪಾವಳಿ, ಕಾರ್ತಿಕ ಸೋಮವಾರ ವಾರ್ಷಿಕ ಜಾತ್ರೆಗಳು ವಿಜೃಂಭಣೆಯಿಂದ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್

**ಸಂಖ್ಯೆ 89/209**

## ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 16 (ಕರ್ನಾಟಕ ವಾರ್ತೆ)**

ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಸಂತೋಷ್ ಎಸ್. ಲಾಡ್ ಅವರು ಸೆಪ್ಟೆಂಬರ್ 17 ರಿಂದ 20 ರವರೆಗೆ ಹುಬ್ಬಳ್ಳಿ, ಕಲಘಟಗಿ ಯಲ್ಲಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿನಾಂಕ: 20-9-2017 ರಂದು ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

**ಸಂಖ್ಯೆ 90/210**

## ವನ್ಯಜೀವಿ ಸಪ್ತಾಹ ಆಚರಣೆ

**ಬೆಂಗಳೂರು, ಸೆಪ್ಟೆಂಬರ್ 16 (ಕರ್ನಾಟಕ ವಾರ್ತೆ)**

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ 63 ನೇ ವನ್ಯಜೀವಿ ಸಪ್ತಾಹವನ್ನು ಆಚರಣೆ ಮಾಡುತ್ತಿದ್ದು, ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 9ರ ವರೆಗೆ ಮಾನವ ವನ್ಯಜೀವಿ ಸಂಘರ್ಷ ತಡೆಯುವು ಹಾಗೂ ಪರಿಸರ ಬಗ್ಗೆ ಜಾಗೃತಿ ಮೂಡಿಸುವ ಕುರಿತು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸೆಪ್ಟೆಂಬರ್ 17 ರಂದು ಬೆಳಿಗ್ಗೆ 10–00 ಗಂಟೆಗೆ ಚಿತ್ರಕಲಾ ಸ್ಪರ್ಧೆ, ಮಧ್ಯಾಹ್ನ 12–00 ಗಂಟೆಗೆ ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದ್ದು ಈ ಕಾರ್ಯಕ್ರಮಕ್ಕೆ ಖ್ಯಾತ ಚಲನಚಿತ್ರ ನಟ ವಿಜಯರಾಘವೇಂದ್ರ ಅವರು ಚಾಲನೆ ನೀಡಲಿದ್ದಾರೆ.

ಅಕ್ಟೋಬರ್ 2 ರಂದು ಬೆಳಿಗ್ಗೆ 7–00 ಗಂಟೆಗೆ **Walk for wildlife** ಕಾಲ್ನಡಿಗೆಯನ್ನು ಹಮ್ಮಿಕೊಳ್ಳಲಾಗಿದ್ದು ಹೈಕೋರ್ಟ್ ಮುಂಭಾಗದಿಂದ ಲಾಲ್‌ಬಾಗ್ ವರೆಗೆ ನಡೆಯಲಿದೆ. ಖ್ಯಾತ ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ಅವರು ಚಾಲನೆ ನೀಡಲಿದ್ದಾರೆ.

ಅಕ್ಟೋಬರ್ 9 ರಂದು ಬೆಳಿಗ್ಗೆ 11.00 ಗಂಟೆಗೆ 63 ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭವನ್ನು ಜೆ.ಎನ್.ಟಾಟಾ ಆಡಿಟೋರಿಯಂ, **THE INDIAN INSTITUTE OF SCIENCE,** ಮಲ್ಲೇಶ್ವರಂ ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬನ್ನೇರುಘಟ್ಟ, ರಾಷ್ಟ್ರೀಯ ಉದ್ಯಾನವನ, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

<u>ಸಂಖ್ಯೆ 91/211</u>

## ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನಸಹಾಯ: ಅರ್ಜಿ ಆಹ್ವಾನ

<u>ಬೆಂಗಳೂರು, ಸೆಪ್ಟೆಂಬರ್ 16 (ಕರ್ನಾಟಕ ವಾರ್ತೆ)</u>

2017–18 ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನಸಹಾಯ ನೀಡುವ ಸಲುವಾಗಿ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಘಟಕದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು ಆಯಾ ವಲಯ/ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ನಿಧಿಗಳ ಕಛೇರಿಗೆ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 31–10–2017 ರ ಒಳಗಾಗಿ ಸಲ್ಲಿಸಲು ತಿಳಿಸಿದೆ.

ಪದವಿ ಪೂರ್ವ ಕಾಲೇಜುಗಳು ಹಾಗೂ ಮೇಲ್ಪಟ್ಟ ವಿದ್ಯಾಸಂಸ್ಥೆಗಳ ಪ್ರಾಂಶುಪಾಲರು ಮತ್ತು ಮೇಲ್ಪಟ್ಟ ವಿದ್ಯಾಸಂಸ್ಥೆಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರುಗಳು ಅವರವರ ಮೇಲಧಿಕಾರಿಗಳ ಮುಖಾಂತರ ದಿನಾಂಕ 31–10–2017 ರೊಳಗೆ ಅರ್ಜಿಗಳನ್ನು ನಿಧಿಗಳ ಕಛೇರಿಗೆ ನೇರವಾಗಿ ಸಲ್ಲಿಸಬೇಕು.

ಅರ್ಜಿ ನಮೂನೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲ **www.schooleducation.kar.nic.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಗದಿಪಡಿಸಿರುವ ಅಂತಿಮ ದಿನಾಂಕ, 31–10–2017 ರ ನಂತರ ಬರುವ ಅರ್ಜಿಗಳನ್ನು ಹಾಗೂ ಅಪೂರ್ಣ ಮಾಹಿತಿಯ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ 92/212**

# ಗೃಹ ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 16 (ಕರ್ನಾಟಕ ವಾರ್ತೆ)**

ಗೃಹ ಸಚಿವ ರಾಮಲಿಂಗಾರೆಡ್ಡಿ ಅವರು ಸೆಪ್ಟೆಂಬರ್ 18 ರಂದು ಬೆಳಿಗ್ಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಸಂಜೆ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

**ಸಂಖ್ಯೆ 93/213**

# ಜನಪ್ರಿಯವಲ್ಲದ ಪ್ರವಾಸೋದ್ಯಮ ತಾಣಗಳ ಪರಿಚಯಿಸುವ ನೂತನ ಕಾರ್ಯಕ್ರಮಕ್ಕೆ ಚಾಲನೆ

**ಬೆಂಗಳೂರು, ಸೆಪ್ಟೆಂಬರ್ 16 (ಕರ್ನಾಟಕ ವಾರ್ತೆ)**

ಪ್ರವಾಸಿಗರ ಮನೆ ಬಾಗಿಲಿನಿಂದಲೇ ಕರೆದೊಯ್ಯುವುದು ಸೇರಿದಂತೆ, ಕಾರು/ಸುವ್‌ಗಳಲ್ಲಿ ವಿವಿಧ ತಾಣಗಳಿಗೆ ಪ್ರವಾಸದ ಅವಕಾಶ ಕಲ್ಪಿಸಲಾಗಿದೆ. ಓಲಾ ಸಹಯೋಗದಲ್ಲಿ ಇದು ಕಾರ್ಯಗತಗೊಳ್ಳಲಿದೆ. ಓಲಾ ರಾಜ್ಯದಲ್ಲಿ ಪ್ರವಾಸೋದ್ಯಮ ಪ್ರಚಾರಪಡಿಸಲು ಸಾಕಷ್ಟು ಕ್ರಮ ಕೈಗೊಳ್ಳುತ್ತಿದೆ ಎಂಬುದು ನಿಜಕ್ಕೂ ಸಂತಸ ತಂದಿದೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಖಾತೆ ಸಚಿವ ಪ್ರಿಯಾಂಕ್ ಎಂ. ಖರ್ಗೆ ಅವರು ಹೇಳಿದರು.

ಇಂದು ವಿಧಾನ ಸೌಧ ಮುಂಭಾಗದಲ್ಲಿ ಪ್ರವಾಸೋದ್ಯಮ ಇಲಾಖೆ ಹಮ್ಮಿಕೊಂಡಿದ್ದ ಜನಪ್ರಿಯವಲ್ಲದ ಪ್ರವಾಸೋದ್ಯಮ ತಾಣಗಳ ಪರಿಚಯಿಸೊ ನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಓಲಾ ಕಂಪನಿಯ ಸಹಭಾಗಿತ್ವವಿರುವ ಈ ಯೋಜನೆಯ ಜವಾಬ್ದಾರಿ ಪ್ರವಾಸೋದ್ಯಮ ಇಲಾಖೆ ಆಯೋಜಿಸಿದೆ ಎಂದರು.

ಕರ್ನಾಟಕ ಒಂದು ರಾಜ್ಯ, ಅನೇಕ ಜಗತ್ತು. ಪ್ರಕೃತಿ, ವನ್ಯಜೀವಿ, ಬೀಚ್‌ಗಳು, ಬೆಟ್ಟಗುಡ್ಡ, ಸಾಹಸ, ಪರಂರೆ, ಧರ್ಮ ಸೇರಿದೆಂತೆ ಅತ್ಯುತ್ತಮವಾದುದನ್ನು ರಾಜ್ಯದಲ್ಲಿ ಕಾಣಬಹುದಾಗಿದೆ. ಕರ್ನಾಟಕ

ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಈಗ ನೂತನ ಪ್ಯಾಕೇಜ್‌ಗಳನ್ನು ಪ್ರವಾಸಿಗಳಿಗಾಗಿ ರೂಪಿಸಿದೆ ಎಂದು ಹೇಳಿದರು.

ವಿಶ್ವ ಪ್ರವಾಸಿ ದಿನಕ್ಕಾಗಿ ವಿಶ್ವಸಂಸ್ಥೆ ಘೋಷವಾಕ್ಯಕ್ಕೆ ಅನುಗುಣವಾಗಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಪ್ರವಾಸೋದ್ಯಮ ಪ್ರಚಾರದ ಭಾಗವಾಗಿ ಹಾಗೂ ಸ್ಥಳೀಯ ಸಂಸ್ಕೃತಿಯನ್ನು ಗೌರವಿಸುವ, ಪರಿಸರ ಸ್ನೇಹಿ ಪ್ರವಾಸೋದ್ಯಮದ ಅಭಿಯಾನದ ಭಾಗವಾಗಿ ಹಾಗೂ ಜನಪ್ರಿಯವಲ್ಲದ ತಾಣಗಳ ಪ್ರವಾಸೋದ್ಯಮ ಪ್ರಚಾರಕ್ಕಾಗಿ  ಜನಪ್ರಿಯ ನಟಿ ವ್ಲೋಗರ್ ಶೆನಾಜ್ ಟ್ರೆಸರಿ ಅವರು ಆಕರ್ಷಕ ವಾಸ್ತುಶಿಲ್ಪ ಪ್ರವಾಸಿ ತಾಣಗಳಾದ ಹಂಪಿ, ಐಹೊಳೆ, ಬಾದಾಮಿ, ಪಟ್ಟದಕಲ್ ಕುರಿತು ಪ್ರಚಾರ ಮಾಡಲಿದ್ದಾರೆ.

ಓಲಾದ ಸ್ಥಾಪಕ ಪಾಲುದಾರರಾದ ಪ್ರಣಯ್ ಜೀವ್‌ರಾಜಕಾ ಅವರು ಮಾತನಾಡಿ ಭಾರತದ ಪ್ರವಾಸೋದ್ಯಮವು ಪ್ರಗತಿ ಹೊಂದುತ್ತಿದ್ದು, ಪ್ರವಾಸಿಗಳ ಸಂಚಾರವು ಹೆಚ್ಚುತ್ತಿದೆ. ಇದು, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಪರಿಣಾಮ ಬೀರಲಿದೆ. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಪ್ರಚಾರ ಮಾಡುವುದು ಮುಖ್ಯವಾಗಲಿದೆ. ಓಲಾ ಔಟ್‌ಸ್ಟೇಷನ್ ಅಭಿಯಾನದ ಮೂಲಕ ನಮ್ಮ ಉದ್ದೇಶವೂ ಅದೇ ಆಗಿದೆ. ಪ್ರವಾಸಿಗರೂ ಸ್ಥಳೀಯ ಸಂಸ್ಕೃತಿ ಅರಿಯುವ ನಿಟ್ಟಿನಲ್ಲಿ ಆದಷ್ಟು ಪ್ರವಾಸ ತೆರಳಬೇಕು, ಸುಸ್ಥಿರ ಪ್ರವಾಸೋದ್ಯಮದ ಪ್ರಗತಿಗೆ ಓಲಾ ಔಟ್‌ಸ್ಟೇಷನ್ ಮೂಲಕ ಒತ್ತು ನೀಡಲು ಸಂತಸವಾಗುತ್ತಿದೆ ಎಂದರು.

ನಟಿ ಶೇನಾಜ್ ಟ್ರಸರಿ ಅವರು ಮಾತನಾಡಿ ಪ್ರವಾಸದ ವಿಷಯದಲ್ಲಿ ಭಾರತ ಎಂದಿಗೂ ನನ್ನ ಹೃದಯದಲ್ಲಿ ವಿಶೇಷ ಸ್ಥಾನ ಪಡೆಯಲಿದೆ, ನಾನು ಪ್ರವಾಸಿ ಪ್ರಿಯಳು. ಪ್ರವಾಸ ತೆರಳುವ ಮೂಲಕ ನಾವು ಇಂಥ ಸ್ಥಳಗಳನ್ನು ಉಳಿಸಬೇಕಾಗಿದೆ. ಪ್ರತಿಯೊಬ್ಬರು ಈ ನಿಟ್ಟಿನಲ್ಲಿ ಸಾಕಷ್ಟು ಕೊಡುಗೆ ನೀಡಬಹುದು. ನಾನು ಈ ಯೋಜನೆಗೆ ರಾಯಭಾರಿಯಾಗಿರುವುದು ಸಂತಸ ತಂದಿದೆ. ಕರ್ನಾಟಕದ ಪುರಾತತ್ವ, ಪ್ರಾಚೀನ ದೇಗುಲಗಳಿಗೆ ಓಲಾ ಔಟ್‌ಸ್ಟೇಷನ್ ಜೊತೆಗೂಡಿ ಹೋಗುವುದು ಖುಷಿಯ ವಿಷಯ ಎಂದು ಹೇಳಿದರು.

ಛಾಯಾಚಿತ್ರ ಶೀರ್ಷಿಕೆ:

ಜನಪ್ರಿಯವಲ್ಲದ ಪ್ರವಾಸೋದ್ಯಮ  ತಾಣಗಳ ಪರಿಚಯಿಸೊ ನೂತನ ಕಾರ್ಯಕ್ರಮಕ್ಕೆ ಚಾಲನೆ ವಿಧಾನ ಸೌಧ ಮುಂಭಾಗದಲ್ಲಿ ಇಂದು ಪ್ರವಾಸೋದ್ಯಮ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ಚಾಲನೆ ನೀಡಿದರು.  ಓಲಾ ಕಂಪನಿಯ ಸಹಭಾಗಿತ್ವವಿರುವ ಈ ಯೋಜನೆಯ ಜವಾಬ್ದಾರಿ ಪ್ರವಾಸೋದ್ಯಮ ಇಲಾಖೆ ಆಯೋಜಿಸಿದೆ. ಯೋಜನಾ ವಾಹನಕ್ಕೆ ಸಚಿವರು ಹಸಿರು ನಿಶಾನೆ ತೋರುವ ವೇಳೆ ಕೆ.ಎಸ್.ಟಿ.ಡಿ.ಸಿ. ಎಂ.ಡಿ. ಕುಮಾರ್ ಪುಷ್ಕರ್ ಓಲಾ ಕಂಪನಿಯ ಜಿಬ್ರಾಷ್ಕರ್  ಹಾಗೂ ಬಾಲಿವುಡ್ ನಟಿ ಶೆಹನಾಜ್ ಟ್ರೆಸರಿ ಉಪಸ್ಥಿತರಿದ್ದರು.